ಮೀಡಿಯಾ ಮಾತ್ರ ಗೆಳೆತನದಲ್ಲಿತ್ತು. ನನಗೆ ಸಂಯೋಗವೆಂಬಂತೆ ಫೇಸ್‌ಬುಕ್‌ನಲ್ಲಿ ಸಿಯಾಟಲ್‌ನಲ್ಲಿದ್ದ ಯುವತಿಯರ ಗುಂಪೊಂದು ಸಿಕ್ಕಿತು. ನಾನಿಲ್ಲಿಗೆ ಹೊಸದಾಗಿ ಬಂದಿದ್ದೇನೆ, ನನಗೆ ಸ್ವಿಮ್ಮಿಂಗ್, ಯೋಗ, ಆಯಿಲ್ ಮಸಾಜ್ ಮತ್ತು ನ್ಯಾಚುರಲ್ ಹೀಲಿಂಗಿನಲ್ಲಿ ಆಸಕ್ತಿಯಿದೆ ಎಂದು ಅವರಿಗೆ ಪೋಸ್ಟ್ ಮಾಡಿದೆ. ಅವರು ಉತ್ಸಾಹದಿಂದ ನನ್ನನ್ನು ಸ್ವಾಗತಿಸಿದರು. ಸಮಾನ ಆಸಕ್ತಿಯುಳ್ಳ ಕೆಲವು ಮಹಿಳೆಯರೊಂದಿಗೆ ನನ್ನ ಸಂಪರ್ಕವಾಯಿತು, ಅವರು ಶೀಘ್ರವೇ ನನ್ನ ಗೆಳತಿಯರಾದರು. ಭಾಷೆ ಸಮಸ್ಯೆಯಾಗಿರಲಿಲ್ಲ. ಎಲ್ಲರೂ ಇಂಗ್ಲಿಷ್ ಮಾತನಾಡುತ್ತಿದ್ದರು. ಸ್ಥಳೀಯ ಜನರೊಂದಿಗೆ ಸಂವಾದಿಸುವುದರಿಂದ ಜಗತ್ತನ್ನು ನೋಡುವ ಮತ್ತು ಅರಿತುಕೊಳ್ಳುವ ನನ್ನ ದೃಷ್ಟಿ ಬದಲಾಗುತ್ತಿದೆ ಎಂಬುದನ್ನು ನಾನು ಮನಗಂಡೆ. ಜೀವನದ ಅನುಭವಗಳನ್ನು ಪಡೆಯಲು ಹೊಸ ವೇದಿಕೆಯೊಂದು ಲಭಿಸಿತ್ತು.

ಅಮೇರಿಕವನ್ನು ನಾನು ಮನಸಾರೆ ಇಷ್ಟಪಟ್ಟೆ. ಅತಿ ಶೀಘ್ರದಲ್ಲಿಯೇ ಈ ದೇಶ ನನ್ನೊಳಗೆ ಮನೆ ಮಾಡುತ್ತಿತ್ತು. ನನ್ನ ಧಮನಿಗಳಲ್ಲಿ ಉಲ್ಲಾಸ ಮತ್ತು ಸ್ಫೂರ್ತಿ ಹರಿದಾಡಿತು.

'ಹೀಗೋ!'

ಹೌದು ಪಾಲ್, ಮುಖ್ಯ ಕಾರಣವೆಂದರೆ, ಇಲ್ಲಿ ನನ್ನ ಜೋಶುಆ ಸಮೀಪದಲ್ಲಿದ್ದ... ಅವನು ಅಮೇರಿಕದೊಂದಿಗೆ ಮಿಳಿತವಾದ ಕೆನಡಾದ ಬ್ರಿಟಿಷ್ ಕೊಲಂಬಿಯಾ ರಾಜ್ಯದ ವೈಂಕೂವರ್ ನಗರದಲ್ಲಿ ಅಧ್ಯಯನ ಮಾಡುತ್ತಿದ್ದ. ಅವನು ಈಗ ಯುವಕನಾಗಿದ್ದು, ತುಂಬಾ ಸುಂದರನಾಗಿದ್ದ. ಈಗ ನಾನು ವ್ಯವಸ್ಥಿತಳಾಗಿದ್ದು, ನನ್ನ ಬಳಿ ಸಾಕಷ್ಟು ಸಮಯವಿತ್ತು. ನೀಲ್ ಮುದ್ದಿನ ಮತ್ತು ಶಾಂತ ಶಿಶುವಾಗಿದ್ದ. ತುಂಬಾ ನಿದ್ರಿಸುತ್ತಿದ್ದ. ನಾನು ತುಂಬು ಪ್ರೀತಿಯಿಂದ ನನ್ನ ಕರುಳಿನ ಮುದ್ದು ಕುಡಿಯನ್ನು ಸಾಕುತ್ತಿದ್ದೆ. ಅವನ ಬಗ್ಗೆ ನನ್ನ ಮಮಕಾರ ಅಗಾಧವಾಗಿತ್ತು. ಅವನು ನನ್ನ ಲೈಫ್‌ಲೈನ್ ಆಗಿದ್ದ. ನನ್ನ ಡೋಲಾಯಮಾನ ಹಡಗಿನ ಆ್ಯಂಕರ್ ಆಗಿದ್ದ.

ಸಿಯಾಟಲ್‌ನಿಂದ ವೈಂಕೂವರ್‌ಗೆ ಬಸ್‌ನಿಂದ ಕೇವಲ ಮೂರು ಗಂಟೆಯ ಪ್ರಯಾಣವಾಗಿತ್ತು. ಜೋಶ್ ದೊಡ್ಡವನಾದಂತೆ, ಅವನು ನನ್ನ ಬಳಿಗೆ ಬರುವುದು ಕ್ರಮೇಣ ಕಡಿಮೆಯಾಯಿತು. ಪರೀಕ್ಷೆಗಳು, ಕಾಲೇಜಿನ ಪ್ರವಾಸ, ತರಬೇತಿ, ಅವನು ಸ್ನೇಹಿತರೊಂದಿಗೆ ಕಳೆಯುವುದು ನಡೆದೇ ಇರುತ್ತಿತು... ನನ್ನ ಬಳಿಗೆ ಬರುವುದು ಅವನ ಮೊದಲ ಆದ್ಯತೆಯಾಗಿ ಉಳಿದಿರಲಿಲ್ಲ.

'ಮಕ್ಕಳು ದೊಡ್ಡವರಾದ ನಂತರ ಹೀಗೆಯೇ ಆಗುತ್ತದೆ. ತಂದೆತಾಯಿ ಅವರ ಕೇಂದ್ರದಲ್ಲಿರುವುದಿಲ್ಲ. ಅವರ ಜೀವನ ಇತರೆ ದಿಕ್ಕುಗಳಿಗೆ ವ್ಯಾಪಿಸುತ್ತದೆ. ಕೇಂದ್ರಗಳೂ ಬದಲಾಗುತ್ತವೆ.'

ಪಾಲ್, ಹೀಗೆಯೇ ಆಗುತ್ತದೆ... ನಿಮಗೆಲ್ಲವೂ ಗೊತ್ತಿದೆ. ನೀವು ಎಲ್ಲವನ್ನೂ ಅನುಭವಿಸಿದ್ದೀರಿ.

ಇದು ನನಗೆ ಜೋಶ್‌ನೊಂದಿಗೆ ಕೆಲವು ಸಮಯ ಕಳೆಯುವ ಸುವರ್ಣಾವಕಾಶವಾಗಿತ್ತು. ಮಾರ್ಕೋ ಅಮೇರಿಕಕ್ಕೆ ಹೋಗುತ್ತಲೇ ತನ್ನ ನೌಕರಿಯಲ್ಲಿ ವ್ಯಸ್ತನಾಗಿದ್ದ. ನಾನು ಈ ನೆಲದಲ್ಲಿ ಇಳಿದ ಮೂರು ತಿಂಗಳ ನಂತರ ನೀಲ್‌ನೊಂದಿಗೆ ವೈಂಕೂವರ್‌ಗೆ ಹೋದೆ. ಬಸ್ ಪ್ರಯಾಣ ಹಿತಕರವಾಗಿತ್ತು. ಪ್ರಾಕೃತಿಕ ಸೌಂದರ್ಯ ಅಪ್ರತಿಮವಾಗಿತ್ತು. ವೈಂಕೂವರ್ ಜಗತ್ತಿನ ಸುಂದರ ನಗರಗಳಲ್ಲಿ ಒಂದಾಗಿದೆ. ಜೋಶುಆ ನಮ್ಮನ್ನು ಕರೆದೊಯ್ಯಲು ಬಸ್ ಸ್ಟಾಪ್‌ಗೆ ಬಂದಿದ್ದ. ಬಾಲ್ಯದಲ್ಲಿ ಕೃಶಕಾಯ ಮತ್ತು ಸೌಮ್ಯನಾಗಿದ್ದ ಜೋಶುಆ ಈಗ ನೀಳಕಾಯದ ದಷ್ಟಪುಷ್ಟ ಯುವಕನಾಗಿದ್ದ. ಅವನು ತನ್ನ ತಂದೆಯನ್ನು ಹೋಲುತ್ತಿದ್ದ.

ಅವನು ಯೂಬಿಸಿ ಅಂದರೆ ಯೂನಿವರ್ಸಿಟಿ ಆಫ್ ಬ್ರಿಟಿಷ್ ಕೊಲಂಬಿಯಾದಿಂದ ಮಾಸ್ಟರ್ಸ್ ಕೋರ್ಸ್ ಮಾಡುತ್ತಿದ್ದ. ಅವನು ಯೂನಿವರ್ಸಿಟಿಯ ಸಮೀಪದಲ್ಲಿದ್ದ ಫ್ಲಾಟ್‌ನಲ್ಲಿ ಇಬ್ಬರು ಸ್ನೇಹಿತರೊಂದಿಗೆ ಇದ್ದ. ಕರತಾರ್ ಸಿಂಗ್ ಸಿಖ್ ಆಗಿದ್ದ; ಇವನು ಹುಟ್ಟುವುದಕ್ಕೆ ಮೊದಲೇ ಇವನ ತಂದೆತಾಯಿ ಭಾರತದಿಂದ ಟೊರಂಟೋಕ್ಕೆ ಹೋಗಿ ನೆಲೆಸಿದ್ದರು. ಬಹಳಷ್ಟು ಬದಲಾವಣೆಗಳಾದವು, ಆದರೆ ಎಲ್ಲವೂ ಬದಲಾಗಲಿಲ್ಲ. ಅವನು ತನ್ನ ವಿಶೇಷ ಗುರುತಾದ ಪೇಟ ಧರಿಸುವುದನ್ನು ಮಾತ್ರ ಬಿಡಲಿಲ್ಲ. ನನ್ನ ಪರಿವಾರ 1984ರಲ್ಲಿ ಆಗಿನ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರ ಹತ್ಯೆಯ ನಂತರ ಸಿಖ್ಖರ ಮೇಲೆ ನಡೆದ ನರಸಂಹಾರದಿಂದ ಗಾಬರಿಗೊಂಡು ಕೆನಡಾದಲ್ಲಿ ಶರಣಾಗಿತ್ತು ಎಂಬುದು ಅವನ ಹೇಳಿಕೆಯಾಗಿತ್ತು.

'ನರಸಂಹಾರ! ನೀನು ಯಾವ ವರ್ಷ ಹುಟ್ಟಿದ್ದೆ?' ನಾನು ಕೇಳಿದೆ.

'1986ರಲ್ಲಿ' ಎಂದ ಕರತಾರ್.

'ಓಹ್ ಆಗ ನೀನು ಹುಟ್ಟಿಯೇ ಇರಲಿಲ್ಲ.'

'ಭಾರತದಲ್ಲಿ ಸಿಖ್ಖರ ಸಾಮೂಹಿಕ ಹತ್ಯೆಯಾಗಿತ್ತು ಎಂದು ಪರಿವಾರದವರಿಂದ ಎಲ್ಲವನ್ನೂ ಕೇಳಿದ್ದೇನೆ...'

'ನಾನು ಕೇರಳದವಳು, ಕೇರಳ ದಿಲ್ಲಿಯಿಂದ ತುಂಬಾ ದೂರದಲ್ಲಿದೆ. ಇಂದಿರಾ ಗಾಂಧಿಯವರ ಇಬ್ಬರು ಬಾಡಿಗಾರ್ಡ್ ಅವರನ್ನು ಹತ್ಯೆ ಮಾಡಿದ್ದರೆಂದು ನಾನು ಪತ್ರಿಕೆಗಳಲ್ಲಿ ನೋಡಿದ್ದೆ ಕೇಳಿದ್ದೆ. ತದನಂತರ ದಿಲ್ಲಿಯಲ್ಲಿ ಸಿಖ್ ವಿರೋಧಿ ದಂಗೆ ನಡೆದವು, ಆ ದಂಗೆಯಲ್ಲಿ ನೂರಾರು ಅಮಾಯಕ ಸಿಖ್ಖರು ತಮ್ಮ ಪ್ರಾಣವನ್ನು ಕಳೆದುಕೊಂಡರು.'

'ಅಂಗರಕ್ಷಕರೇ ಗುಂಡು ಹಾರಿಸಿದರೇ?' ಜೋಶುಆ ಆಶ್ಚರ್ಯದಿಂದ ಹೇಳಿದ, 'ಮಿತ್ರ, ನಿನ್ನನ್ನು ನಾನು ನಂಬಬಹುದೇ?' ಅವನ ಮಾತಿನಲ್ಲಿ ವ್ಯಂಗ್ಯವಿತ್ತು.

'ಚುಪ್...' ಎಂದೆ ನಾನು. ಜೋಶುಆ ಮತ್ತೆ ಆಶ್ಚರ್ಯಗೊಂಡ. ಇತಿಹಾಸದ ಅರೆಬರೆ ಸತ್ಯಗಳ ಬಗ್ಗೆ ಏನು ಚರ್ಚಿಸುವುದು? ನನಗೇ ಇಡೀ ಸತ್ಯ ತಿಳಿದಿಲ್ಲ. ಆದರೆ ನನಗೆ ಕರತಾರ್ ನನ್ನ ಮಗನಿಗೆ ಒಬ್ಬ ಭರವಸೆಯುಳ್ಳ ಮಿತ್ರ ಎಂಬುದಷ್ಟೇ ಸಾಕಿತ್ತು.

ಜೋಶ್‌ನ ಇನ್ನೊಬ್ಬ ಸಂಗಾತಿ ವಿಯೆಟ್ನಾಂನ ಮೀಯೂಂಗ್ ದಾಂಗ್ ಆಗಿದ್ದ. ನನ್ನ ತಂದೆ ತಾಯಿ ವಿಯಟ್ನಾಂ ಯುದ್ಧದ ನಂತರ 1975ರಲ್ಲಿ ಅಮೇರಿಕದಲ್ಲಿ ನೆಲೆಸಿದ್ದರು, 'ನನ್ನ ತಂದೆ ತಾಯಿ ಯುದ್ಧದ ಸಂದರ್ಭದಲ್ಲಾದ ನಾಶ ಮತ್ತು ಭಯಾನಕ ಆಘಾತಗಳ ಬಗ್ಗೆ ನನಗೆ ಹೇಳಿದರು' ಎಂದು ಮೀಯೂಂಗ್ ದಾಂಗ್ ಹೇಳಿದ. ಮೂವರೂ ತಮ್ಮ ದೇಶದಿಂದ ಸ್ಥಳಾಂತರಗೊಂಡ ತಂದೆತಾಯಿಯ ಮಕ್ಕಳಾಗಿದ್ದರು. ಮೂವರ ಪರಿಸ್ಥಿತಿ ಮತ್ತು ಸಂಘರ್ಷ ಒಂದೇ ತೆರನಾಗಿತ್ತು.

ಅವನ ಇಬ್ಬರು ಗೆಳೆಯರು ನನ್ನನ್ನು ನೋಡಿ ಮೊದಲು ಗಾಬರಿಗೊಂಡರು. ಏಕೆಂದರೆ ನನ್ನ ಮಡಿಲಿನಲ್ಲಿ ಎಳೆಯ ಮಗುವಿತ್ತು. ಒಮ್ಮೆ ನನ್ನನ್ನು ನೋಡಿ, ಇನ್ನೊಮ್ಮೆ ನೀಲ್‌ನನ್ನು ನೋಡಿ ಆಶ್ಚರ್ಯದಿಂದ ಜೋಶ್‌ಗೆ ಹೇಳಿದರು, 'ಇವರು ನಿಮ್ಮ ತಾಯಿಯೋ ಅಥವಾ ಅಕ್ಕನೋ?'

'ನನ್ನ ತಾಯಿ...' ಜೋಶ್ ನನ್ನ ಹೆಗಲ ಮೇಲೆ ಕೈಯಿಟ್ಟು ಹೆಮ್ಮೆಯಿಂದ ಹೇಳಿದ, 'ನಾನು ಹುಟ್ಟಿದಾಗ ಮಮ್ಮಿಯ ವಯಸ್ಸು ಈಗಿನ ನನ್ನ ವಯಸ್ಸಾಗಿತ್ತು.'

'ಓಹ್... ಯಂಗ್ ಮದರ್...!'

'ಮಮ್ಮಿಗೆ ನನ್ನ ತಾಯಿಯಾಗಲು ಅದು ಸರಿಯಾದ ವಯಸ್ಸಾಗಿತ್ತು' ಎಂದ ಜೋಶ್.

ನಾನು ನೆನಪಿನಲ್ಲಿ ಕಳೆದುಹೋದೆ. ಜೋಶ್ ಹುಟ್ಟಿದಾಗ ನಾನು ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಕಾಲಿಟ್ಟಿದ್ದೆ. ಇಂದು ಜೋಶ್ ಇಪ್ಪತ್ತನೆಯ ವಯಸ್ಸಿಗೆ ಕಾಲಿಟ್ಟಿದ್ದ; ಈ ಗ್ಲೋಬಲ್ ಜಗತ್ತಿನಲ್ಲಿ ನೆಲೆ ಕಾಣಲು ಸಂಘರ್ಷಿಸುತ್ತಿದ್ದ. ಯೂನಿವರ್ಸಿಟಿ ಆಫ್ ಬ್ರಿಟಿಷ್ ಕೊಲಂಬಿಯಾ ಒಂದು ದುಬಾರಿ ಯೂನಿವರ್ಸಿಟಿಯಾಗಿತ್ತು. ಅಲ್ಲಿ ವಿದ್ಯಾಭ್ಯಾಸವನ್ನು ಮಾಡುವುದು ಎಲ್ಲರಿಗೂ ಸುಲಭವಾಗಿರಲಿಲ್ಲ. ನಾನು ಅವನಿಗೆ ಖರ್ಚಿನ ಬಗ್ಗೆ ಕೇಳಿದಾಗ ಅವನು, ಸ್ವಲ್ಪ ಹಣವನ್ನು ಡ್ಯಾಡಿ ಕೊಡುತ್ತಾರೆ, ಇನ್ನು ಸ್ವಲ್ಪ ಹಣಕ್ಕೆ ಬ್ಯಾಂಕಿನಲ್ಲಿ ಸಾಲ ತೆಗೆದುಕೊಳ್ಳುತ್ತಿದ್ದೇನೆ, ಒಂದು ಇಂಡಿಯನ್ ರೆಸ್ಟೋರೆಂಟಿನಲ್ಲಿ ಪಾರ್ಟ್ ಟೈಮ್ ಬೇರರ್ ಆಗಿ ಕೆಲಸ ಮಾಡಿ ಹಣ ಗಳಿಸುತ್ತೇನೆ. ಜೀವನಕ್ಕೆ ಸಾಕು ಎಂದ.

ಅವನ ಫೇಸ್‌ಬುಕ್‌ನಿಂದ, ಅನೇಕ ಬಿಳಿ ಹುಡುಗಿಯರೊಂದಿಗೆ ಅವನಿಗೆ ಗೆಳೆತನವಿದೆ ಎಂಬುದು ತಿಳಿಯಿತು. ಅದರ ಮಿತಿಯೇನು ಎಂಬುದು ತಿಳಿದಿರಲಿಲ್ಲ, ಆದರೆ ಮುಂಬರುವ ದಿನಗಳಲ್ಲಿ ಅವನು ನಾನಾ ವಿಧದ ಹುಡುಗಿಯರೊಂದಿಗೆ ರೊಮ್ಯಾಂಟಿಕ್ ಪೋಸ್‌ಗಳಲ್ಲಿ ತನ್ನ ಫೋಟೋಗಳನ್ನು ಹಾಕುತ್ತಿದ್ದ. ಇದು ನನ್ನ ಸಿಟ್ಟು ಮತ್ತು ಚಿಂತೆಗೆ ಕಾರಣವಾಗಿತ್ತು. ಆದರೆ ಅವನಿಗೇನು ಹೇಳುವುದು? ಅವನ ತಂದೆ ತಾಯಿಯಲ್ಲಿ ಒಬ್ಬರೂ ಅವನಿಗೆ ಆದರ್ಶವಾಗಿರಲಿಲ್ಲ. ಆದರೆ ಒಮ್ಮೆ ಮಾತಿನ ಮಧ್ಯೆ, ಮದುವೆಯ ಬಗ್ಗೆ ನಿನ್ನ ಅಭಿಪ್ರಾಯವೇನು ಎಂದು ಕೇಳಿದಾಗ ಅವನು, 'ಬಿಳಿ ಹುಡುಗಿಯರು ಗೆಳೆತನಕ್ಕೆ ಮಾತ್ರ ಸರಿ. ನಾನು ದೇಶಿ ಹುಡುಗಿಯನ್ನೇ ಮದುವೆಯಾಗ್ತೀನಿ, ಮಲೆಯಾಳಿ ಇಂಡಿಯನ್ ಆದರೆ ಇನ್ನೂ ಒಳ್ಳೆಯದು' ಎಂದ.

(ಸಶೇಷ)